Government of Karnataka
**BELAGAVI INSTITUTE OF MEDICAL SCIENCES**
(Autonomous Medical Institution)
Dr. B R Ambedkar Road, Belagavi – 590 001 Office No. 0831-2421464, 2421453, Fax No. 0831-2403126. Website: WWW.bimsbelgaum.org E-mail: belgaum.bims@gmail.com

ಟೆಂಡರ್ ಅಧಿಸೂಚನೆ ಸಂಖ್ಯೆ:ಬಿಮ್ಸ/ಟೆಂಡರ್/ ಕ್ಲೀನರ/15–16/2021–22 **ದಿನಾಂಕ:30/06/2021**

**ಹೊರಗುತ್ತಿಗೆ ಅಡಿ ಕ್ಲೀನರಗಳ ಹಾಗೂ ಗ್ರೂಪ್–ಡಿ ಮತ್ತು ಡಾಟಾ ಸೇವೆಗಳನ್ನು ಪಡೆಯಲು ದಿನಾಂಕ:30/06/2021ರಂದು ಜರುಗಿದ ಅಂಗೀಕಾರ ಸಭೆಯ ನಡುವಳಿಗಳು**

ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಂದ ಕೋವಿಡ್–19 ನಿಯಂತ್ರಣಕ್ಕಾಗಿ ಎಸ್.ಡಿ.ಆರ್.ಎಫ್. ಅನುದಾನದಡಿ 100 ಗ್ರೂಪ್–ಡಿ ಹುದ್ದೆಗಳನ್ನು ಆರು ತಿಂಗಳ ಅವಧಿಗಾಗಿ ಮಂಜೂರು ಮಾಡಿದ್ದು, ಸದರಿ ಹುದ್ದೆಗಳನ್ನು ಹೊರಗುತ್ತಿಗೆ ಅಡಿ ಭರ್ತಿ ಮಾಡಿಕೊಳ್ಳಲು ಈ ಕೆಳಗಿನಂತೆ ಟೆಂಡರ್ ಆಹ್ವಾನಿಸಲಾಗಿತ್ತು.

1. ಟೆಂಡರ್ ಅಧಿಸೂಚನೆ ಸಂಖ್ಯೆ:ಬಿಮ್ಸ/ಟೆಂಡರ್/ಕ್ಲೀನರ್/15/2021–22 ದಿನಾಂಕ:09/06/2021 – 38 ಕ್ಲೀನರ್ ಹುದ್ದೆಗಳು,
2. ಟೆಂಡರ್ ಅಧಿಸೂಚನೆ ಸಂಖ್ಯೆ:ಬಿಮ್ಸ/ಟೆಂಡರ್/ಗ್ರೂಪ್–ಡಿ/16/2021–22 ದಿನಾಂಕ:09/06/2021 – 54 ಗ್ರೂಪ್–ಡಿ ಹಾಗೂ ಡಿ.ಇ.ಓ ಹುದ್ದೆಗಳು

ಸಭೆಯಲ್ಲಿ ಈ ಕೆಳಕಂಡ ಅಂಗೀಕಾರ ಸಮೀತಿ ಸಭೆಯ ಸದಸ್ಯರು ಉಪಸ್ಥಿರಿದ್ದರು.

| | | |
|---|---|---|
| 1. | ನಿರ್ದೇಶಕರು, ಬಿಮ್ಸ, ಬೆಳಗಾವಿ | ಅಧ್ಯಕ್ಷರು |
| 2. | ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ (ಬಿಮ್ಸ ಬೋಧಕ) ಆಸ್ಪತ್ರೆ, ಬೆಳಗಾವಿ | ಸದಸ್ಯರು |
| 3. | ಮುಖ್ಯ ಆಡಳಿತಾಧಿಕಾರಿಗಳು, ಬಿಮ್ಸ, ಬೆಳಗಾವಿ | ಸದಸ್ಯರು |
| 4. | ಅರ್ಥಿಕ ಸಲಹೆಗಾರರು, ಬಿಮ್ಸ, ಬೆಳಗಾವಿ | ಸದಸ್ಯ ಕಾರ್ಯದರ್ಶಿ |
| 5. | ವೈದ್ಯಕೀಯ ಅಧೀಕ್ಷಕರು, ಬಿಮ್ಸ ಆಸ್ಪತ್ರೆ, ಬೆಳಗಾವಿ | ಸದಸ್ಯರು |

ನಿರ್ದೇಶಕರು, ಬಿಮ್ಸ ಇವರ ಕೊಠಡಿಯಲ್ಲಿ ದಿನಾಂಕ:30/06/2021ರಂದು ಮದ್ಯಾಹ್ನ 3.00 ಗಂಟೆಗೆ ಟೆಂಡರ್ ಅಂಗೀಕಾರ ಸಭೆಯನ್ನು ಜರುಗಿಸಲಾಯಿತು.

ನಿರ್ದೇಶಕರು, ಬಿಮ್ಸ, ಬೆಳಗಾವಿ ಇವರು ಎಲ್ಲ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು.

ಸದರಿ ಎರಡೂ ಟೆಂಡರ್‌ನಲ್ಲಿ ಈ ಕೆಳಗೆ ನಮೂದಿಸಿದ 5 ಜನ ಬಿಡ್ಡದಾರರು ಭಾಗವಹಿಸಿದ್ದು ಇ–ಪೋರ್ಟಲ್ ನಲ್ಲಿ ಎಲ್ಲರೂ ಯಶಸ್ವಿಯಾದ ಪ್ರಯುಕ್ತ ದಿನಾಂಕ:22/06/2021 ಹಾಗೂ 23/06/2021ರಂದು ಎಲ್ಲ ಬಿಡ್ಡದಾರರ ಮೂಲದಾಖಲೆಗಳನ್ನು ಪರಿಶೀಲಿಸಲು ಸಮೀತಿಯನ್ನು ನೇಮಿಸಲಾಗಿತ್ತು. ಸದರಿ ಮೂಲದಾಖಲೆಗಳನ್ನು ಪರಿಶೀಲಿಸಿ ದಾಖಲೆ ಪರಿಶೀಲನಾ ಸಮೀತಿಯು ವರದಿಯನ್ನು ಸಲ್ಲಿಸಿದ್ದು, ಅದರಂತೆ ಈ ಕೆಳಕಂಡ ಬಿಡ್ಡುದಾರರು ಸಲ್ಲಿಸಿದ ದಾಖಲೆಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

1. **ಎಂ.ಕೆ.ಬೆಳವಡಿ, ಹುಬ್ಬಳ್ಳಿ**
2. **ಮನೀಶ್ ಮ್ಯಾನ್‌ಪಾವರ್ ಏಜನ್ಸಿ, ಕಲಬುರ್ಗಿ**
3. **ಶಾರ್ಪವಾಚ್ ಇನವೆಸ್ಟಿಗೇಶನ್ & ಸೆಕ್ಯುರಿಟಿ ಸರ್ವಿಸೆಸ್, ಮೈಸೂರು**
4. **ರಾಮ ಕಂಪ್ಯೂಟರ್ಸ, ಬೆಳಗಾವಿ.**
5. **ಪೂಜಾಯ ಸೆಕ್ಯುರಿಟಿ ಸರ್ವಿಸೆಸ್, ಬೆಂಗಳೂರು**

1. **ಎಂ.ಕೆ.ಬೆಳವಡಿ, ಹುಬ್ಬಳ್ಳಿ**

ಸದರ ಬಿಡ್ಡುದಾರರು ಟೆಂಡರ್‌ನಲ್ಲಿ ಸೂಚಿಸಿದಂತೆ ಎಲ್ಲ ದಾಖಲೆಗಳನ್ನು ಅಪ್‌ಲೋಡ್ ಮಾಡಿದ್ದು, ಮೂಲದಾಖಲೆಗಳ ಪರಿಶೀಲನೆ ಸಮಯದಲ್ಲಿ ಎಲ್ಲ ಮೂಲದಾಖಲೆಗಳನ್ನು ತೋರಿಸಿರುತ್ತಾರೆ.

2. **ಮನೀಶ್ ಮ್ಯಾನ್‌ಪಾವರ್ ಏಜನ್ಸಿ, ಕಲಬುರ್ಗಿ**

ಸದರ ಬಿಡ್ಡುದಾರರು ಟೆಂಡರ್‌ನಲ್ಲಿ ಸೂಚಿಸಿದಂತೆ ಎಲ್ಲ ದಾಖಲೆಗಳನ್ನು ಅಪ್‌ಲೋಡ್ ಮಾಡಿದ್ದು, ಮೂಲದಾಖಲೆಗಳ ಪರಿಶೀಲನೆ ಸಮಯದಲ್ಲಿ ಎಲ್ಲ ಮೂಲದಾಖಲೆಗಳನ್ನು ತೋರಿಸಿರುತ್ತಾರೆ. ಆದರೆ ನಾನ್–ಕನ್ವಿಕ್ಷನ್ (Non-Conviction) ಪ್ರಮಾಣಪತ್ರವನ್ನು ಕಾರ್ಮಿಕ ಇಲಾಖೆಯಿಂದ ಪಡೆದು ಸಲ್ಲಿಸದೇ ಸ್ವಯಂ ದೃಢೀಕರಿಸಿ ಸಲ್ಲಿಸಿರುತ್ತಾರೆ.

3. **ಶಾರ್ಪವಾಚ್ ಇನವೆಸ್ಟಿಗೇಶನ್ & ಸೆಕ್ಯುರಿಟಿ ಸರ್ವಿಸೆಸ್, ಮೈಸೂರು**

ಸದರ ಬಿಡ್ಡುದಾರರು ಟೆಂಡರ್‌ನಲ್ಲಿ ಸೂಚಿಸಿದಂತೆ ಎಲ್ಲ ದಾಖಲೆಗಳನ್ನು ಅಪ್‌ಲೋಡ್ ಮಾಡಿದ್ದು, ಮೂಲದಾಖಲೆಗಳ ಪರಿಶೀಲನೆ ಸಮಯದಲ್ಲಿ ಎಲ್ಲ ಮೂಲದಾಖಲೆಗನ್ನು ತೋರಿಸಿರುತ್ತಾರೆ.

4. **ರಾಮ ಕಂಪ್ಯೂಟರ್ಸ್, ಬೆಳಗಾವಿ.**

ಸದರ ಬಿಡ್ಡುದಾರರು ಟೆಂಡರ್‌ನಲ್ಲಿ ಸೂಚಿಸಿದಂತೆ 2017–18, 2018–19 ಹಾಗೂ 2019–20 ನೇ ಸಾಲಿನಲ್ಲಿ ಇ.ಪಿ.ಎಫ್ ಕಟಾವಣೆ ಕುರಿತು ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದ ಮೂರು ವರ್ಷಗಳ ವಿವರ ಹಾಗೂ 2017–18, 2018–19 ಹಾಗೂ 2019–20 ನೇ ಸಾಲಿನಲ್ಲಿ ಇ.ಎಸ್.ಐ. ಕಟಾವಣೆ ಕುರಿತು ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದ ಮೂರು ವರ್ಷಗಳ ವಿವರ ಎಲ್ಲ ದಾಖಲೆಗಳನ್ನು ಅಪ್‌ಲೋಡ್ ಮಾಡಿರುವುದಿಲ್ಲ ಹಾಗೂ ಪರಿಶೀಲನೆಗೆ ಸಲ್ಲಿಸಿರುವುದಿಲ್ಲ ಉಳಿದ ಎಲ್ಲ ಮೂಲದಾಖಲೆಗಳನ್ನು ಪರಿಶೀಲನೆ ಸಮಯದಲ್ಲಿ ತೋರಿಸಿರುತ್ತಾರೆ.

6. **ಪೂಜಾಯ ಸೆಕ್ಯುರಿಟಿ ಸರ್ವಿಸೆಸ್, ಬೆಂಗಳೂರು**

ಸದರ ಬಿಡ್ಡುದಾರರು ಮೂಲದಾಖಲೆಗಳ ಪರಿಶೀಲನೆಗೆ ಹಾಜರಾಗಿರುವುದಿಲ್ಲ.

ಈ ಮೇಲಿನ ಎಲ್ಲ ಅಂಶಗಳನ್ನು ದಾಖಲೆ ಪರಿಶೀಲನಾ ಸಮೀತಿಯು ಸಲ್ಲಿಸಿದ ವಿವರ ಹಾಗೂ ಚೆಕ್‌ಲಿಸ್ಟಗಳೊಂದಿಗೆ ಸಮೀತಿಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು. ಚರ್ಚೆಯ ನಂತರ ಸಮೀತಿಯು ಸರ್ವಾನುಮತದಿಂದ ಈ ಕೆಳಕಂಡ ಬಿಡ್‌ದಾರರ ಹಣಕಾಸಿನ ಬಿಡ್‌ಗಳನ್ನು ತೆರೆಯಲು ತೀರ್ಮಾನಿಸಿತು.

| ಕ್ರಸಂ | ಬಿಡ್‌ದಾರರ ಹೆಸರು | ಸಮೀತಿಯ ತೀರ್ಮಾಣ |
|---|---|---|
| 1 | **ಎಂ.ಕೆ.ಬೆಳವಡಿ, ಹುಬ್ಬಳ್ಳಿ** | ಸದರ ಬಿಡ್ಡುದಾರರು ಎರಡೂ ಬಿಡ್‌ಗಳಲ್ಲಿ ಭಾಗವಹಿಸಿದ್ದು, ಟೆಂಡರ್ ಷರತ್ತಿನಲ್ಲಿ ಸೂಚಿಸಿದಂತೆ ಎಲ್ಲ ದಾಖಲೆಗಳನ್ನು ಅಪ್‌ಲೋಡ್ ಮಾಡಿದ್ದು, ಮೂಲದಾಖಲೆಗಳ ಪರಿಶೀಲನೆ ಸಮಯದಲ್ಲಿ ಎಲ್ಲ ಮೂಲದಾಖಲೆಗನ್ನು ತೋರಿಸಿರುತ್ತಾರೆ. ಆದ್ದರಿಂದ ಅವರು ಅರ್ಹರಿದ್ದು ಹಣಕಾಸಿನ ಬಿಡ್ ತೆರೆಯಲು ತೀರ್ಮಾನಿಸಲಾಯಿತು. |
| 2 | **ಮನೀಶ್ ಮ್ಯಾನ್‌ಪಾವರ್ ಏಜನ್ಸಿ, ಕಲಬುರ್ಗಿ** | ಸದರ ಬಿಡ್ಡುದಾರರು ಎರಡೂ ಬಿಡ್‌ಗಳಲ್ಲಿ ಭಾಗವಹಿಸಿದ್ದು, ಟೆಂಡರ್ ಷರತ್ತಿನಲ್ಲಿ ದಿನಾಂಕ;–13/06/2021 ರ ತಿದ್ದುಪಡಿ ಅನುಭಂದಲ್ಲಿ ಸೂಚಿಸಿದಂತೆ ನಾನ್–ಕನ್ವಿಕ್ಷನ್ (Non-Conviction) ಪ್ರಮಾಣಪತ್ರವನ್ನು ಕಾರ್ಮಿಕ ಇಲಾಖೆಯಿಂದ ಪಡೆದು ಸಲ್ಲಿಸದೇ ಸ್ವಯಂ ದೃಢೀಕರಿಸಿ ಸಲ್ಲಿಸಿದ್ದು ಸದರಿ ಬಿಡ್‌ದಾರರ ತಾಂತ್ರಿಕ ಬಿಡ್‌ನ್ನು ತಿರಸ್ಕರಿಸಲು ತೀರ್ಮಾನಿಸಲಾಯಿತು. |

| | | |
|---|---|---|
| 3 | **ಶಾರ್ಪವಾಚ್ ಇನವೆಸ್ಟಿಗೇಶನ್ & ಸೆಕ್ಯುರಿಟಿ ಸರ್ವಿಸಿಸ್, ಮೈಸೂರು** | ಸದರ ಬಿಡ್ಡುದಾರರು ಎರಡೂ ಬಿಡ್‌ಗಳಲ್ಲಿ ಭಾಗವಹಿಸಿದ್ದು, ಈ ಹಿಂದೆ ಕರೆದ ಟೆಂಡರ್‌ನಲ್ಲಿ ಭದ್ರತಾ ಸೇವೆಯ ಲೈಸೆನ್ಸ (Licence to engage in the business of Private Security Agency) ಪ್ರಮಾಣ ಪತ್ರದ ಅವಧಿಯು ದಿನಾಂಕ: 08/09/2020 ಕ್ಕೆ ಮುಕ್ತಾಯವಾಗಿದ್ದನ್ನು ದಿನಾಂಕ: 08/09/2021 ಕ್ಕೆ ಮುಕ್ತಾಯವಾಗುತ್ತದೆ ಎಂಬ ಮೂಲ ದಾಖಲೆಯನ್ನು ಅಪ್‌ಲೋಡ್ ಮಾಡಿದ್ದು, ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಬೆಂಗಳೂರು ಇವರ ಮಾರ್ಗದರ್ಶನದಂತೆ ಆಡಿಶನಲ್ ಡೈರೆಕ್ಟರ್ ಜನರಲ್ ಆಫ್ ಪೋಲೀಸ್ (ಇಂಟರನಲ್ ಸೆಕ್ಯುರಿಟಿ ಡಿವಿಜನ್) ಬೆಂಗಳೂರು ಅವರಿಗೆ ಭದ್ರತಾ ಸೇವೆಯ ಲೈಸೆನ್ಸ (Licence to engage in the business of Private Security Agency) ಪ್ರಮಾಣಪತ್ರದ ನೈಜತೆಯನ್ನು ಪರಿಶೀಲಿಸಿ ತಿಳಿಸುವಂತೆ ದಿನಾಂಕ:27/11/2020 ಹಾಗೂ 23/12/2020ರಂದು ಪತ್ರ ಬರೆಯಲಾಗಿ ಅವರ ಪತ್ರ ಸಂ:ಹೆಚ್‌ಡಿ 334 ಎಸ್‌ಎಸ್‌ಟಿ 2020 ದಿನಾಂಕ:28/01/2021ರ ಪತ್ರದಲ್ಲಿ ಅವರ ಅವಧಿಯು ದಿನಾಂಕ:08/09/2020ಕ್ಕೆ ಮುಕ್ತಾಯ ವಾಗಿರುವುದಾಗಿ ತಿಳಿಸಿರುತ್ತಾರೆ. ಈ ಕುರಿತು ತಪ್ಪು ಮಾಹಿತಿ ಅಪ್‌ಲೋಡ್ ಮಾಡಿದ್ದಕ್ಕಾಗಿ ಸೂಕ್ತ ಶಿಸ್ತು ಕ್ರಮ ಜರುಗಿಸುವಂತೆ ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಬೆಂಗಳೂರು ಹಾಗೂ ಅಧ್ಯಕ್ಷರು, ಖರೀದಿ ಸಮೀತಿ, ಬಿಮ್ಸ, ಬೆಳಗಾವಿ ಇವರಲ್ಲಿ ಈ ಕಾರ್ಯಾಲಯದ ದಿನಾಂಕ:03/02/2021ರ ಪತ್ರದಲ್ಲಿ ಕೋರಲಾಗಿದ್ದು. ಅದರಂತೆ ದಿನಾಂಕ;-18/05/2021 ರಂದು ಖರೀದಿ ಸಮಿತಿಯ ಸಭೆಯಲ್ಲಿ ಸದರಿ ಬಿಡ್‌ದಾರರು ಭದ್ರತಾ ಲೈಸೆನ್ಸ್ ತಿದ್ದುಪಡಿಮಾಡಿದ (Tampered) ಪ್ರಮಾಣ ಪತ್ರ ಅಪ್‌ಲೋಡ್ ಮಾಡಿದ್ದಕ್ಕಾಗಿ ತಿರಸ್ಕರಿಸಲಾಗಿದ್ದು ಇರುತ್ತದೆ. ಮಾನ್ಯ ನಿರ್ದೇಶಕರು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಬೆಂಗಳೂರು ಇವರಿಂದ ಈ ಕಾರ್ಯಾಲಯದ ಪತ್ರ ದಿನಾಂಕ;-03/02/2021 ರ ಬಗ್ಗೆ ಅಂತಿಮ ತೀರ್ಮಾನ ಇಲ್ಲಿಯವರೆಗೆ ಬಾರದೇ ಇರುವುದರಿಂದ ಶಾರ್ಪವಾಚ್ ಇನವೆಸ್ಟಿಗೇಶನ್ & ಸೆಕ್ಯುರಿಟಿ ಸರ್ವಿಸಿಸ್, ಮೈಸೂರು ಇವರ ತಾಂತ್ರಿಕ ಬಿಡ್‌ನ್ನು ತಿರಸ್ಕರಿಸಲು ತೀರ್ಮಾನಿಸಲಾಯಿತು. |
| 4 | **ರಾಮ ಕಂಪ್ಯೂಟರ್ಸ್, ಬೆಳಗಾವಿ.** | ಸದರ ಬಿಡ್ಡುದಾರರು ಎರಡೂ ಬಿಡ್‌ಗಳಲ್ಲಿ ಭಾಗವಹಿಸಿದ್ದು, ಟೆಂಡರ್‌ನ ಷರತ್ತುಗಳಲ್ಲಿ ಕ್ರಮ ಸಂಖ್ಯೆ ಅನುಭಂದ 3(v) ಪುಟ ಸಂಖ್ಯೆ 4 ರಲ್ಲಿ ಸೂಚಿಸಿದಂತೆ 2017-18, 2018-19 ಹಾಗೂ 2019-20 ನೇ ಸಾಲಿನಲ್ಲಿ ಇ.ಪಿ.ಎಫ್ |

| | | |
|---|---|---|
| | | ಕಟಾವಣೆ ಕುರಿತು ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದ ಮೂರು ವರ್ಷಗಳ ವಿವರ ಹಾಗೂ 2017–18, 2018–19 ಹಾಗೂ 2019–20 ನೇ ಸಾಲಿನಲ್ಲಿ ಇ.ಎಸ್.ಐ. ಕಟಾವಣೆ ಕುರಿತು ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದ ಮೂರು ವರ್ಷಗಳ ವಿವರದ ದಾಖಲೆಗಳನ್ನು ಅಪ್‌ಲೋಡ್ ಮಾಡಿರುವುದಿಲ್ಲ ಹಾಗೂ ಪರಿಶೀಲನೆಗೆ ಸಲ್ಲಿಸಿರುವುದಿಲ್ಲವಾದ್ದರಿಂದ ಅವರ ತಾಂತ್ರಿಕ ಬಿಡ್‌ನ್ನು ತಿರಸ್ಕರಿಸಲು ತೀರ್ಮಾನಿಸಲಾಯಿತು. |
| 5 | **1. ಪೂಜಾಯ ಸೆಕ್ಯುರಿಟಿ ಸರ್ವಿಸಿಸ್, ಬೆಂಗಳೂರು** | ಸದರಿ ಬಿಡ್‌ದಾರರು ಮೂಲದಾಖಲೆಗಳ ಪರಿಶೀಲನೆಗೆ ಹಾಜರಾಗದ ಪ್ರಯುಕ್ತ ಅವರ ಬಿಡ್‌ನ್ನು ತಿರಸ್ಕರಿಸಲು ತೀರ್ಮಾನಿಸಲಾಯಿತು. |

ಈ ಮೇಲಿನ ಅಂಶಗಳನ್ನು ಚರ್ಚಿಸಿದ ನಂತರ ಅರ್ಥಿಕ ಬಿಡ್ಡಿಗೆ ಒಬ್ಬರೆ ಮಾತ್ರ ಸಿಂಗಲ ಬಿಡ್ ಆಗಿರುವುದರಿಂದ ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ 576 ವೆಚ್ಚ–12/2016 ದಿನಾಂಕ:20/03/2017 ಮತ್ತು ಸುತ್ತೋಲೆ ಸಂಖ್ಯೆ: ಆಇ 576 ವೆಚ್ಚ–12/2018 ದಿನಾಂಕ:22/05/2018ರ ಆದೇಶದ ಮೇರೆಗೆ ಸಿಂಗಲ್ ಬಿಡ್ ಅಸಾಧರಣೆಂದು ಪರಿಗಣಿಸಿ ಮತ್ತು ಈ ಟೆಂಡರ್ ಅವಧಿ ಕೇವಲ 6 ತಿಂಗಳ ಮಾತ್ರ ಇದ್ದು ಈಗಾಗಲೇ 1 1/2 ತಿಂಗಳು ಮುಗಿದಿದ್ದು, ಆಸ್ಪತ್ರೆಯಲ್ಲಿ ಕೋವಿಡ್–19 ನಿರ್ವಹಣೆ ತುರ್ತು ಪರಿಸ್ಥಿತಿ ಇರುವುದರಿಂದ ಅಂಗೀಕಾರ ಸಮೀತಿಯ ಸಭೆಯಲ್ಲಿ ಸಿಂಗಲ್ ಬಿಡ್‌ದಾರರಾದ ಎಮ್. ಕೆ. ಬೆಳವಡಿ ಹುಬ್ಬಳ್ಳಿ ಇವರ ಆರ್ಥಿಕ ಬಿಡ್ ತೆರೆಯಲು ಸರ್ವಾನುಮತದಿಂದ ಅನುಮತಿಸಲಾಯಿತು.

**Sd/-**
**ವೈದ್ಯಕೀಯ ಅಧೀಕ್ಷಕರು,**
**ಬಿಮ್ಸ ಆಸ್ಪತ್ರೆ, ಬೆಳಗಾವಿ**

**Sd/-**
**ಮುಖ್ಯ ಆಡಳಿತಾಧಿಕಾರಿಗಳು,**
**ಬಿಮ್ಸ, ಬೆಳಗಾವಿ**

**Sd/-**
**ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ**
**ಅರ್ಥಿಕ ಸಲಹೆಗಾರರು,**
**ಬಿಮ್ಸ, ಬೆಳಗಾವಿ**

**Sd/-**
**ಜಿಲ್ಲಾ ಶಸ್ತ್ರಚಿಕಿತ್ಸಕರು,**
**ಜಿಲ್ಲಾ (ಬಿಮ್ಸ ಬೋಧಕ) ಆಸ್ಪತ್ರೆ, ಬೆಳಗಾವಿ**

**Sd/-**
**ನಿರ್ದೇಶಕರು,**
**ಬಿಮ್ಸ, ಬೆಳಗಾವಿ**